**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 03 ಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ:**

**ವಿಷಯ:** ಕರ್ನಾಟಕ ವಿದ್ಯುತ್ ಪ್ರಸರಣಾ ಸಂಸ್ಥೆ ಸುಮಾರು 3500 ಕೋಟಿ ರೂ. ಹೊರೆಯನ್ನು ವಿದ್ಯುತ್ ದರದಲ್ಲಿ ಸೇರ್ಪಡೆಮಾಡಿ ಗ್ರಾಹಕರ ಮೇಲೆ ಹಾಕಲು ರಾಜ್ಯ ಸರ್ಕಾರ ಸಿದ್ಧವಾಗಿದ್ದು, ಕೆಪಿಟಿಸಿಎಲ್ ಮತ್ತು ಎಲ್ಲ ವಿತರಣ ಕಂಪನಿಗಳ ನೌಕರರಿಗೆ ಪಿಂಚಣಿ ಸವಲತ್ತಿಗೆ ಸರ್ಕಾರ ನೀಡಬೇಕಾದ ಪಾಲನ್ನು ಪ್ರತಿ ವರ್ಷ ವಿದ್ಯುತ್ ದರ ಪರಿಷ್ಕರಣೆಯಲ್ಲಿ ಸೇರ್ಪಡೆ ಮಾಡಲು ಅವಕಾಶ ನೀಡಿ ಈ ಕರಡು ಸೂಚನೆಗೆ ಸಾರ್ವಜನಿಕರು ಆಕ್ಷೇಪ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದೆ. ಸಾರ್ವಜನಿಕರು ಇದಕ್ಕೆ ಆಕ್ಷೇಪ ಸಲ್ಲಿಸದೇ ಹೋದಲ್ಲಿ ಇದು ಜಾರಿಗೆ ಬರುತ್ತದೆ.

1999 ರಲ್ಲಿ ಹಿಂದಿನ ಕೆಇಬಿ ಹೋಗಿ ಕೆಪಿಟಿಸಿಎಲ್ ಮತ್ತು 5 ವಿತರಣ ಕಂಪನಿಗಳನ್ನು ರಚಿಸಲು ಸರ್ಕಾರ ತೀರ್ಮಾನಿಸಿತು. ಈಗ ಕೆಇಆರ್‌ಸಿ ಅಸ್ತಿತ್ವಕ್ಕೆ ಬಂದಿತು. ಅಂದಿನಿಂದ ವಿದ್ಯುತ್ ದರ ನಿಗದಿಪಡಿಸುವ ಕೆಲಸವನ್ನು ಈ ಆಯೋಗ ಕೈಗೊಳ್ಳುತ್ತ ಬಂದಿದೆ. 1999 ರಲ್ಲಿ ಸರ್ಕಾರ ಕೆಇಬಿ ಸಾಲವನ್ನು ತಾನೇ ಪಾವತಿ ಮಾಡಿ ಹೊಸ ಲೆಕ್ಕದಲ್ಲಿ ಕೆಲಸ ಆರಂಭ ಮಾಡಲು ಸೂಚಿಸಿತು. ಈ ರೀತಿ ಆರಂಭಗೊಂಡ ಕಂಪನಿಗಳು ಈಗ 29,764,15 ಕೋಟಿ ರೂ. ಸಾಲದಲ್ಲಿ ಮುಳುಗಿರುವುದಾಗಿ ತಿಳಿದು ಬಂದಿರುವುದರಿಂದ, ಸಂಸ್ಥೆ ಮಾಡಿರುವ ಸಾಲ ಹಾಗೂ ನಿವೃತ್ತ ನೌಕರರಿಗೆ ನೀಡುತ್ತಿರುವ ಪಿಂಚಣಿ ಹಣವನ್ನು ಗ್ರಾಹಕರ ಮೇಲೆ ಹೊರೆಸುವುದು ಯಾವ ನ್ಯಾಯ ಈ ವಿಷಯವನ್ನು ಮಾನ್ಯ ಇಂಧನ ಸಚಿವರ ಗಮನ ಸೆಳೆಯುವ ಬಗ್ಗೆ.

****

1. ನೌಕರರ ಹಿತರಕ್ಷಣೆಯನ್ನು ಕಾಪಾಡುವ ಸಂಬಂಧ ರಾಜ್ಯ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಕವಿ ಮಂಡಳಿ ನೌಕರರ ಸಂಘದೊಂದಿಗೆ Karnataka Electricity Reforms Ordinance 1999 ರನ್ವಯ ದಿನಾಂಕ 31.07.1999 ರಂದು ತ್ರಿಪಕ್ಷೀಯ ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಈ ಒಪ್ಪಂದದ ಕಂಡಿಕೆ (ಡಿ) ಅನ್ವಯ ಸರ್ಕಾರ ಮತ್ತು ಮಂಡಳಿ/ ಉತ್ತರಾಧಿಕಾರಿ ಸಂಸ್ಥೆಗಳು ತುಟ್ಟಿ ಭತ್ಯೆ ಒಳಗೊಂಡಂತೆ ಪಿಂಚಣಿ ಪಾವತಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳ ಪಾವತಿಯನ್ನು ಖಾತ್ರಿ ಪಡಿಸಬೇಕಿರುತ್ತದೆ.

2. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ (ವರ್ಗಾವಣೆ ನಿಯಮಗಳು) ನಿಯಮಗಳು 1999ರಡಿ ಕವಿಮಂಡಳಿಯನ್ನು ನಿಗಮೀಕರಣಮಾಡಿ ಕವಿಪ್ರನಿನಿಯನ್ನು ರಚಿಸಲಾಗಿರುತ್ತದೆ. ಕವಿಪ್ರನಿನಿಯನ್ನು ರಚಿಸುವ ಪೂರ್ವದಲ್ಲಿ ಅಂದರೆ ಕವಿಮಂಡಳಿಯಲ್ಲಿ ಪಿಂಚಣಿ ಸವಲತ್ತುಗಳನ್ನು ಸಿಬ್ಬಂದಿ ವೆಚ್ಚದಲ್ಲಿ ಸೇರಿಸಿ, ಜಕಾತಿಯಿಂದಲೇ ವಸೂಲಾತಿ ಮಾಡುವ ಕ್ರಮವನ್ನು ಅನುಕರಿಸಲಾಗುತ್ತಿತ್ತು. ಪಿಂಚಣಿ ವೆಚ್ಚಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಯಾವುದೇ ಅನುದಾನ/ ಸಹಾಯಧನವನ್ನು ಒದಗಿಸಲಾಗುತ್ತಿರಲಿಲ್ಲ. ಕವಿಪ್ರನಿನಿಯನ್ನು ಪುನರ್ ರಚಿಸಿ ವಿಸಕಂಗಳು ರಚನೆಯಾಗುವ ಮಧ್ಯಂತರ ಅವಧಿ (1999 ರಿಂದ 2002) ಯಲ್ಲಿ ಪಿಂಚಣಿ ಪಾವತಿಗಾಗಿ ಸರ್ಕಾರವು ಅನುದಾನವನ್ನು ಒದಗಿಸಿರುತ್ತದೆ.

3. ತ್ರಿಪಕ್ಷೀಯ ಒಪ್ಪಂದದ ಕಂಡಿಕೆ (d) ಅನ್ವಯ ಸರ್ಕಾರವು ಪಿಂಚಣಿ ಪಾವತಿಯನ್ನು ಖಾತ್ರಿ ಪಡಿಸಿದ್ದು ಹಾಗೂ ಎರಡನೇ ವರ್ಗಾವಣೆ ಯೋಜನೆ ನಿಯಮ 2002 ರ ನಿಯಮ (4) ಉಪ ನಿಯಮ 13(1)ರಲ್ಲಿ ಪಿಂಚಣಿ ಪಾವತಿಗೆ ಸೂಕ್ತ ವ್ಯವಸ್ಥೆ (Appropriate arrangements) ಮಾಡಲು ಅವಕಾಶ ಕಲ್ಪಿಸಲಾಗಿದೆ.

...2

ಇದಕ್ಕನುಸಾರ, ಕವಿಪ್ರನಿನಿ/ ವಿಸಕಂಗಳ ಸಿಬ್ಬಂದಿಗಳ ಪಿಂಚಣಿ ಮೊತ್ತ (ಸರ್ಕಾರದ ಭಾಗದ ಮೊತ್ತ) ವನ್ನು ಜಕಾತಿಯಲ್ಲಿ ಸೇರಿಸಿ ಕ್ಲೇಮು ಮಾಡುವಂತೆ ಸೂಚಿಸಲು, ಸರ್ಕಾರವು ಅಧಿಕಾರ ಹೊಂದಿರುತ್ತದೆ.

4. ರಾಜ್ಯ ಸರ್ಕಾರವು ರಾಜ್ಯದ ಆಯವ್ಯಯದ ಮಿತಿಯಲ್ಲಿಯೇ ಸರ್ಕಾರದ ಎಲ್ಲಾ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಆಯವ್ಯಯದಲ್ಲಿ ಅನುದಾನ ಒದಗಿಸಬೇಕಾಗಿರುವುದರಿಂದ, ಪಿ & ಜಿ ಟ್ರಸ್ಟ್‌ಗೆ ಪ್ರತಿ ಆರ್ಥಿಕ ವರ್ಷದಲ್ಲಿ ಪಾವತಿಸಬೇಕಿರುವ ಪಿಂಚಣಿ ವಂತಿಕೆ ಯನ್ನು (ಸರ್ಕಾರದ ಭಾಗದ ಮೊತ್ತ) ಸಂಪೂರ್ಣವಾಗಿ ಪಾವತಿಸಲಾಗಿರುವುದಿಲ್ಲ. ಆದ್ದರಿಂದ, ಸರ್ಕಾರದಿಂದ ಪಾವತಿಸಬೇಕಾಗಿದ್ದ ಪಿಂಚಣಿ ವಂತಿಕೆ ಬಾಕಿ ಮೊತ್ತವು ಹೆಚ್ಚಳಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಪಾವತಿಸಬೇಕಾಗಿರುವ ಪಿಂಚಣಿ ವಂತಿಕೆಯ ಬಾಕಿ ಮೊತ್ತ (ಹಿಂದಿನ ವರ್ಷಗಳ) ವನ್ನು ಹಾಗೂ ಪ್ರಸ್ತುತ ಸಾಲಿನ ಪಿಂಚಣಿ ವಂತಿಕೆ ಮೊತ್ತವನ್ನು (ಸರ್ಕಾರದ ಭಾಗದ ಮೊತ್ತ) ಬಿಡುಗಡೆಗೊಳಿಸಲು ಕಷ್ಟ ಸಾಧ್ಯವಾಗಿರುತ್ತದೆ.

5. ಪಿ & ಜಿ ಟ್ರಸ್ಟ್‌ಗೆ ಕವಿಪ್ರನಿನಿ/ ವಿಸಕಂಗಳಿಂದ ಮತ್ತು ಸರ್ಕಾರದಿಂದ ಪಾವತಿಯಾಗುವ ಪಿಂಚಣಿ ವಂತಿಕೆಯ ಹೂಡಿಕೆ ಮೇಲಿನ ಬಡ್ಡಿಗಳಿಕೆಯನ್ನು ಹೊರತುಪಡಿಸಿ, ಇತರ ಯಾವುದೇ ಆರ್ಥಿಕ ಮೂಲಗಳಿಲ್ಲದಿರುವುದರಿಂದ, ನಿವೃತ್ತಿ ಸೌಲಭ್ಯಗಳ ಪಾವತಿಗಾಗಿ ಸರ್ಕಾರ / ಕಂಪನಿಗಳ ವಂತಿಕೆಯನ್ನೇ ಅವಲಂಬಿಸಬೇಕಿರುತ್ತದೆ.

6. ಸರ್ಕಾರವು ತನ್ನ ಭಾಗದ ಪಿಂಚಣಿ ವೆಚ್ಚವನ್ನು ಕವಿಪ್ರನಿನಿ ಹಾಗೂ ವಿಸಕಂ ಗಳು ಪ್ರಸರಣ ವೆಚ್ಚ / ವಿದ್ಯುತ್ ಸರಬರಾಜುವಿನ ವೆಚ್ಚ ಜಕಾತಿ ಮೂಲಕ ವಸೂಲಾತಿಮಾಡಲು ನಿರ್ಧರಿಸಿದರೆ, ಈ ಮೊತ್ತವನ್ನು ಜಕಾತಿಯಲ್ಲಿ ಕ್ಲೇಮುಮಾಡಲು ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ.

7. ವಿದ್ಯುತ್ ಕಾಯಿದೆ-2003ರಲ್ಲಿ ವಿದ್ಯುತ್ ಸರಬರಾಜು ವೆಚ್ಚವನ್ನು ಜಕಾತಿಯಲ್ಲಿ ಪ್ರತಿಬಿಂಬಿಸಲು ಅವಕಾಶ ಕಲ್ಪಿಸಿದ್ದು, ಈ ವೆಚ್ಚವು ಬಂಡವಾಳ ವೆಚ್ಚ (CapEx) ಹಾಗೂ ನಿರ್ವಹಣಾ ವೆಚ್ಚಗಳನ್ನು (OpEx)ಒಳಗೊಂಡಿರುತ್ತದೆ ಹಾಗೂ ಪಿಂಚಣಿ ವೆಚ್ಚವು ಸಿಬ್ಬಂದಿ ವೆಚ್ಚದ ಒಂದು ಭಾಗವಾಗಿದ್ದು, ನಿರ್ವಹಣಾ ವೆಚ್ಚದಲ್ಲಿ ಅಡಕವಾಗಿರುತ್ತದೆ. ಪಿಂಚಣಿ ವೆಚ್ಚವನ್ನು ಜಕಾತಿಯಲ್ಲಿ ಸೇರ್ಪಡೆಮಾಡಲು ಯಾವುದೇ ಪ್ರತಿಬಂಧವನ್ನು ವಿಧಿಸಿರುವುದಿಲ್ಲವಾದ್ದರಿಂದ, ಕವಿಮಂಡಳಿ/ ಕವಿಪ್ರನಿನಿ/ ವಿಸಕಂಗಳಲ್ಲಿ ಸಲ್ಲಿಸಿದ ಸೇವೆಗಾಗಿ ಪಿಂಚಣಿದಾರರ ಪಿಂಚಣಿವೆಚ್ಚವನ್ನು ಸರ್ಕಾರ ಭರಿಸುವ ಬದಲು ಪ್ರಧಾನ ಉದ್ಯೋಗದಾತರಾದ ಕವಿಪ್ರನಿನಿ / ವಿಸಕಂ ಗಳು ಜಕಾತಿಯಲ್ಲಿ ಬೇಡಿಕೆ ಮಾಡುವುದು ಸೂಕ್ತವಾಗಿರುತ್ತದೆ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಹೊರೆಯ ಕಾರಣಗಳು.**

8. ಕವಿಪ್ರನಿನಿ ಹಾಗೂ ವಿಸಕಂಗಳು ಪ್ರತಿ ವರ್ಷವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳ ಪ್ರಕಾರ ತನ್ನ ಬಂಡವಾಳ ವೆಚ್ಚವನ್ನು ಪೂರೈಸಲು ಶೇ.70:30 ರ ಸಾಲ ಮತ್ತು ಈಕ್ವಿಟಿಯ ಅನುಪಾತವನ್ನು ಅನುಸರಿಸುತ್ತದೆ.

9. ಕವಿಪ್ರನಿನಿ ಹಾಗೂ ವಿಸಕಂ ಗಳಲ್ಲಿ ಶೇ.70%ರಷ್ಟು ಬಂಡವಾಳವನ್ನು ವಾಣಿಜ್ಯ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಹಾಗೂ ಶೇ.30%ರಷ್ಟು ಬಂಡವಾಳವನ್ನು ಆಂತರಿಕ ಸಂಪನ್ಮೂಲಗಳಿಂದ ಸರಿದೂಗಿಸುವ ಮೂಲಕ ವಿದ್ಯುತ್‌ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತದೆ. ಮೂಲಭೂತ ಸೌಕರ್ಯಗಳಲ್ಲಿ ಮುಖ್ಯವಾಗಿ ವಿದ್ಯುತ್ ಪ್ರಸರಣ / ವಿತರಣೆ ಉಪಕೇಂದ್ರಗಳ ನಿರ್ಮಾಣ, ಪ್ರಸರಣ /

ವಿತರಣೆ ಮಾರ್ಗಗಳ ನಿರ್ಮಾಣ, ಹೆಚ್ಚುವರಿ ವಿದ್ಯುತ್ ಪರಿವರ್ತಕ ಅಳವಡಿಸುವುದು, ಉನ್ನತೀಕರಣದ ಕಾಮಗಾರಿಗಳು, ಗಂಗಾ ಕಲ್ಯಾಣ ಕಾರ್ಯಕ್ರಮ ಕಾಮಗಾರಿಗಳು, ಟರ್ಮಿನಲ್ ಬೇಸ್‌ನ ನಿರ್ಮಾಣ, ವಿದ್ಯುತ್ ಖರೀದಿ ವೆಚ್ಚ ಇತ್ಯಾದಿ, ಒಳಗೊಂಡಿರುತ್ತದೆ. ಅಲ್ಪಾವಧಿ ಸಾಲಗಳನ್ನು ಕಾರ್ಯವಾಹಿ ಬಂಡವಾಳದ ಅವಶ್ಯಕತೆಯನ್ನು ಪೂರೈಸಲು ಪಡೆಯಲಾಗುತ್ತದೆ.

10. ರಾಜ್ಯದ Flagship Program ಆದ ಗಂಗಾ ಕಲ್ಯಾಣ ಯೋಜನೆಯ ಕೃಷಿ ಪಂಪ್ ಸೆಟ್‌ಗಳ ವಿದ್ಯುದ್ದೀಕರಣದ ವೆಚ್ಚದಲ್ಲಿ ಕೇವಲ 25% ಹಣವನ್ನು ಸಮಾಜ ಕಲ್ಯಾಣ ಇಲಾಖೆಯು ಭರಿಸುತ್ತಿದ್ದು, ಉಳಿದ ಖರ್ಚನ್ನು ವಿದ್ಯುತ್ ಸರಬರಾಜು ಕಂಪನಿಗಳೆ ಭರಿಸಬೇಕಿದೆ. ಇದಲ್ಲದೆ ರೈತರ ಕೃಷಿ ಪಂಪುಸೆಟ್‌ಗಳ ಅಕ್ರಮ ಸಕ್ರಮದಡಿಯ ಮೂಲಭೂತ ಸೌಕರ್ಯಕ್ಕೆ ತಗಲುವ ವೆಚ್ಚವನ್ನು ಸರ್ಕಾರ ಭರಿಸದಿರುವುದರಿಂದ ಈ ಎಲ್ಲಾ ಕಾಮಗಾರಿಗಳ ಆರ್ಥಿಕ ಹೊರೆ ವಿದ್ಯುತ್ ಸರಬರಾಜು ಕಂಪನಿಗಳ ಮೇಲೆ ಇದೆ.

11. ಕವಿಪ್ರನಿನಿ ಮತ್ತು ವಿಸಕಂಗಳ ಬಂಡವಾಳ ವೆಚ್ಚ / ಕಾರ್ಯವಾಹಿ ಬಂಡವಾಳ ವೆಚ್ಚವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗರವರಿಂದ ಪ್ರತಿ ವರ್ಷವು ಜಕಾತಿಯ ಪರಿಷ್ಕರಣ ಸಂದರ್ಭದಲ್ಲಿ ವಿವೇಕಯುತ ಪರಿಶೀಲನೆಗೆ (Prudence check) ಒಳಪಡಿಸಿ ಅನುಮೋದಿಸಲಾಗುತ್ತದೆ.

12. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮಾನದಂಡಗಳನುಸಾರ ದಿನಾಂಕ:30.11.2022 ರ ಮಾಹೆಯ ಅಂತ್ಯಕ್ಕೆ ಕವಿಪ್ರನಿನಿ ಮತ್ತು ವಿಸಕಂ ಗಳು ಬಂಡವಾಳ ಕಾಮಗಾರಿಗಳಿಗಾಗಿ ಪಡೆದಿರುವ ಸಾಲದ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ.ಕೋಟಿಗಳಲ್ಲಿ

| ಕ್ರ.ಸಂ | ವಿದ್ಯುತ್ ಸಂಸ್ಥೆ / ವಿಸಕಂಗಳು | ಸಾಲದವಿವರ (ದಿನಾಂಕ: 30.11.2022 ರ ಅಂತ್ಯಕ್ಕೆ) | | |
|---|---|---|---|---|
| | | ದೀರ್ಘಾವಧಿಸಾಲ | ಅಲ್ಪಾವಧಿಸಾಲ | ಒಟ್ಟುಮೊತ್ತ |
| 1 | ಕ.ವಿ.ಪ್ರ.ನಿ.ನಿ | 9,337.88 | 780.82 | 10,118.70 |
| 2 | ಬೆ.ವಿ.ಕಂ | 8,808.02 | 4,884.62 | 13,692.64 |
| 3 | ಮ.ವಿ.ಕಂ | 1,282.26 | 192.86 | 1,475.12 |
| 4 | ಹು.ವಿ.ಕಂ | 7,121.52 | 494.98 | 7,616.50 |
| 5 | ಗು.ವಿ.ಕಂ | 3,241.75 | 467.72 | 3,709.47 |
| 6 | ಚಾ.ವಿ.ಸ.ನಿ.ನಿ | 2,604.51 | 944.04 | 3,548.55 |
| ಒಟ್ಟುಮೊತ್ತ | | 32,395.94 | 7,765.04 | 40,160.98 |

ಸಂಖ್ಯೆ: ಎನರ್ಜಿ 265 ಇಬಿಎಸ್ 2022

(ವಿ. ಸುನೀಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು